2 ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ 2002ರ ಸೆಕ್ಷೆನ್ 3(1)ರ ಮೇರೆಗೆ:–

"ಪ್ರಸ್ತುತ ಆರ್ಥಿಕ ವರ್ಷದ ಕರ್ನಾಟಕ ಮಧ್ಯಮಾವಧಿ ಆರ್ಥಿಕ ಯೋಜನೆ 2004–05 ರಿಂದ 2007–08ರ"ರ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರು : ಈಗ ಶೂನ್ಯವೇಳೆ.. ಮಾನ್ಯ ಬಿ.ಸಿ. ಪಾಟೀಸಲ್‌ರವರು.. ನಾನು ಅವರನ್ನು ಕರೆದಿದ್ದೇನೆ, ಎಲ್ಲರೂ ಕುಳಿತುಕೊಳ್ಳಿ... ಎಲ್ಲರಿಗೂ ಅವಕಾಶ ಕೊಡುತ್ತೇನೆ..

3 ಹಕ್ಕುಚ್ಯುತಿ ಪ್ರಸ್ತಾವ

ವಿಧಾನ ಸಭೆಯಲ್ಲಿ ಸಿ.ಇ.ಟಿ ಮಸೂದೆ ಅಂಗೀಕಾರವಾಗಿರುವುದರ ಬಗ್ಗೆ

ಶ್ರೀ ಕೆ.ಎನ್. ರಾಜಣ್ಣ : ನಾನು ಕಳೆದ ಮೂರು ದಿವಸಗಳಿಂದಲೂ ಬಹಳ ಮಹತ್ತರವಾದ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ತಮ್ಮನ್ನು ಕೇಳುತ್ತಿದ್ದೇನೆ. ದಯಮಾಡಿ ನನಗೆ ಅವಕಾಶ ಮಾಡಿಕೊಡಿ...

ಅಧ್ಯಕ್ಷರು : ರಾಜಣ್ಣನವರೇ, ನಾನು ಈಗ ಮಾನ್ಯ ಪಾಟೀಲರನ್ನು ಕರೆದಿದ್ದೇನೆ..

ಶ್ರೀ ಕೆ.ಎನ್. ರಾಜಣ್ಣ : ನಾನು ನಿಮ್ಮ ಹತ್ತಿರ ಬಂದು... ನಿಯಾಮಾವಳಿ 191ರ..

ಅಧ್ಯಕ್ಷರು : ರಾಜಣ್ಣನವರೇ, ನಿಮಗೂ ಅವಕಾಶ ಕೊಡುತ್ತೇನೆ, ಈಗ ನಾನು ಅವರನ್ನು ಕರೆದಿದ್ದೇನೆ..

ಶ್ರೀ ಕೆ.ಸನ್. ರಾಜಣ್ಣ : ತಾವು ಏನು ಹೇಳಿದಿರಿ ಅಂದರೆ, ಪ್ರಶ್ನೋತ್ತರ ಮುಗಿದು ಶೂನ್ಯವೇಳೆ ತೆಗೆದುಕೊಳ್ಳುವುದಕ್ಕಿಂತ ಮುಂಚೆ ನಿಮ್ಮನ್ನು ಕರೆಯುತ್ತೇನೆಂದು ಹೇಳಿದಿರಿ. ಅದಕೋಸ್ಕರ ನಾನು ತಮ್ಮ ಅಪಣೆ ಪಡೆದು ಎದ್ದುನಿಂತು ಈ ವಿಚಾರ ಪ್ರಸ್ತಾಪ ಮಾಡುತ್ತಿದ್ದೇನೆ...

ಅಧ್ಯಕ್ಷರು : ಪಾಟೀಲ್‌ರೇ, ನಂತರ ನಿಮಗೆ ಅವಕಾಶ ಕೊಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ..

ಶ್ರೀ ಕೆ.ಎನ್. ರಾಜಣ್ಣ (ಬೆಳ್ಳಾವಿ) : ಸನ್ಮಾನ್ಯ ಅಧ್ಯಕ್ಷರೇ, ಈ ನಿಯಾಮಾವಳಿ 191ರನ್ವಯ ನಾನು 2ನೇ ತಾರೀಖು ನಿಮಗೆ ಒಂದು ಸೂಚನೆಯನ್ನು ಕೊಟ್ಟು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೇಳಿದ್ದೆ. ತಾವು ಅನುಮತಿ ಕೊಟ್ಟಿದ್ದೀರಿ ಅದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ನಿಯಾಮಾವಳಿ 191 ಹಕ್ಕುಬಾಧ್ಯತಾ ಪ್ರಶ್ನೆ. ಸದಸ್ಯರು ಅಧ್ಯಕ್ಷರ ಅನುಮತಿ ಪಡೆದು ಸದಸ್ಯರ ಅಥವಾ ಸದನದ ಅಥವಾ ಸದನ ಸಮಿತಿಯ ಹಕ್ಕುಚ್ಯುತಿ ವಿಷಯವನ್ನು ಎತ್ತಬಹುದು. ಇದು ನಿಯಾಮಾವಳಿಯಲ್ಲಿ ಇರುವುದು. ತಾವು ಈಗಾಗಲೇ ನನಗೆ ಅನುಮತಿಯನ್ನು ಕೊಟ್ಟಿದ್ದೀರಿ. ನನ್ನ ಪ್ರಮುಖವಾದ ವಿಚಾರ ಎಂದರೆ, ಈ ರಾಜ್ಯದಲ್ಲಿ ಸಿಇಟಿ ರಾಮಾಯಣ ಬಹಳ ಗೊಂದಲವನ್ನುಂಟು ಮಾಡಿರುವುದು ಅದು ರಾಮಾಯಣ ನಡೆಯುತ್ತಿದೆ. ಇದರ ಪೂರಕವಾಗಿ ಈ ಸಭೆಯಲ್ಲಿ ಕೂಡ ಈ ಸದನ ಏನು ಒಂದು ಐತಿಹಾಸಿಕ ಠರಾವನ್ನು ಕೂಡ ಪಾಸ್ ಮಾಡಿದೆ